ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹುಣಸೂರು

ಸಿ.ಸಿ. **544/2019**

ಸಿ.ಡಬ್ಲ್ಯೂ **7,** ಪಿ.ಡಬ್ಲ್ಯೂ **-6**

ದಿಃ **12.02.2025** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿಯ ಹೆಸರು | ಡಾ. ಸೋಮಶೇಖರ |
| ತಂದೆ/ಗಂಡನ ಹೆಸರು | ಪುಟ್ಟರಾಜು |
| ವಯಸ್ಸು | 45 ವರ್ಷ |
| ಕೆಲಸ | ಹಿರಿಯ ತಜ್ಞರು |
| ವಾಸಸ್ಥಳ | ಕೊಳ್ಳೆಗಾಲ |

ಮುಖ್ಯ ವಿಚಾರಣೆ ಮಾನ್ಯ ಎ.ಪಿ.ಪಿ.ಯವರಿಂದ

ನಾನು ಮೇ **2015** ರಿಂದ ಆಗಸ್ಟ್ **2017** ವರೆಗೆ ಹುಣಸೂರು ಸಾರ್ವಜನಿಕ ಆಸ್ಪತ್ರೆಯಲ್ಲಿ ಹಿರಿಯ ತಜ್ಞರಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ **20.01.2016** ರಂದು ಚಾಸಾ**-1** ರವರು ಬೆಳಿಗ್ಗೆ **11.30** ರ ಸಮಯದಲ್ಲಿ ಹಲ್ಲೆಯ ಹಿನ್ನೆಲೆಯಲ್ಲಿ ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಾಗಿರುತ್ತಾರೆ. ನಾನು ಅವರನ್ನು ವೈದ್ಯಕೀಯ ತಪಾಸಣೆಗೊಳಪಡಿಸಿದಾಗ ರೋಗಿಗೆ ತಕ್ಷಣ ಜ್ಞಾನ ತಪ್ಪಿರುತ್ತದೆ. ಆದಕಾರಣ ಕೆ.ಆರ್. ಆಸ್ಪತ್ರೆಗೆ ಶಿಫಾರಸ್ಸು ಮಾಡಿರುತ್ತೇನೆ. ಕೆ.ಆರ್. ಆಸ್ಪತ್ರೆಯವರು ಚಾಸಾ**-1** ರವರ ತೊಂದರೆ ವಿವರಗಳನ್ನು ನೀಡಿ ಕ್ಷ-ಕಿರಣ ನಡೆಸಿದಾಗ, ಈ ಕೆಳಕಂಡ ಗಾಯಗಳು ಕಂಡು ಬಂದಿರುತ್ತವೆ.

**1. Left side 3rd, 6th and 9th ribs were fractured with surgical emphysema of left lower neck.**

**2. CT head has been examined and given opinion as no trauma related intracranial pathology. But confirmed with soft tissue injury.**

**3. USG abdomen was done and given opinion as negative for trauma related organ injury.**

ನನ್ನ ಅಭಿಪ್ರಾಯದಲ್ಲಿ ಮೇಲೆ ಹೇಳಿದ **1** ನೇ ಗಾಯ ತೀವ್ರ ಸ್ವರೂಪದಾಗಿದ್ದು**, 2** ನೇ ಗಾಯ ಸಾಮಾನ್ಯ ಸ್ವರೂಪದ ಗಾಯವಾಗಿರುತ್ತವೆ**. 3** ನೇ ಗಾಯ **no injury.** ಸಾಕ್ಷಿಗೆ ಚಾಸಾ**-1** ರವರ ಗಾಯದ ಪ್ರಮಾಣ ಪತ್ರವನ್ನು ತೋರಿಸಿದ್ದು**,** ಸಾಕ್ಷಿ ಅದರಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು**,** ಅದನ್ನು ನಿಪಿ**-5** ಎಂದು ಗುರುತಿಸಿದ್ದು**,** ಸಾಕ್ಷಿಯ ಸಹಿಯನ್ನು **5(**ಎ**)** ಎಂದು ಗುರುತಿಸಲಾಯಿತು**. 1** ಮತ್ತು **2** ನೇ ಗಾಯಗಳು ಮು**.**ಮಾ**-1** ರಿಂದ ಹೊಡೆದಾಗ ಆಗುವ ಸಾಧ್ಯತೆ ಇರುತ್ತದೆ**.**

ಪಾಟೀಸವಾಲು ಆರೋಪಿ ಪರಃ

ಆರೋಪಿ ಪಾಟೀಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಸಕಾರಣ ಇಲ್ಲದೇ ಇರುವುದರಿಂದ ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರುವಿಚಾರಣೆ ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು**.**

ಓ ಹೇ ಕೇ ಸರಿ ಇದೆ**.**

ಅಪರ ಸಿವಿಲ್ ಜಡ್ಜ್ ಮತ್ತು ಜೆ**.**ಎಂ**.**ಎಫ್**.**ಸಿ**,**
ಹುಣಸೂರು